ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಮೊದಲು ಇದನ್ನು ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ನಮ್ಮ ಸರ್ಕಾರ ಮಾತ್ರ ತೀರ್ಮಾನ ಮಾಡುವ ಹಾಗಿಲ್ಲ, ಬೊಂಬಾಯಿ ಸರ್ಕಾರದವರೂ ಒಪ್ಪಬೇಕು.

ಶ್ರೀ ವೈ. ಎಂ. ಚೆಂದ್ರಶೇಖರಯ್ಯ.—ಈ ಸೇತುವೆ ಪ್ರಾಮುಖ್ಯವಾದುದೆಂಬುದು ಮರಾಮತ್ತು ಇಲಾಖೆಯವರಿಗೆ ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

Channel from Garudachala river to feed Thogarighatta and Chikkanahalli Tanks of Holavanahalli Hobli.

Q.—909. Sri MUDDURAMIAH (Koratagere-Madhugiri).—

Will the Government be pleased to state.—

(*a*) whether an estimate has been prepared for digging a channel from the river Garudachala near Shakunithimmanahalli to feed the Thogarighatta and Chikkanahalli tanks of Holavanahalli Hobli of Koratagere Taluk ;

(*b*) if so, the amount of the estimate ?

A.—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of answer to (*a*).

ಶ್ರೀ ಮುದ್ದುರಾಮಯ್ಯ.—ಕಳೆದ ಅಧಿವೇಶನದಲ್ಲಿ ಇದೇ ತರಹ ಪ್ರಶ್ನೆ ನಾನು ಹಾಕಿದಾಗ ಪರಿಶೀಲಿಸುತ್ತೇವೆಂದು ಹೇಳಿತ್ತು. ಹಾಗೆ ಪರಿಶೀಲನೆಗೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಪರಿಶೀಲನೆ ಮಾಡಿದ್ದಾರೆ. ಎಸ್ಟಿಮೇಟ್ ಮಾಡಿ ಪರಿಶೀಲಿಸಿದ್ದರಲ್ಲಿ ಇದನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಮುದ್ದುರಾಮಯ್ಯ.—ನಾನು ಕೇಳಿರುವ ಪ್ರದೇಶದಿಂದ ಪರಿಶೀಲನೆ ನಡೆಸಿಲ್ಲ, ಬೇರೆ ಕಡೆಯಿಂದ ಪರಿಶೀಲಿಸಿ ಇದು ಆಗುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಮುದ್ದುರಾಮಯ್ಯ.—ನಾನು ಕೇಳಿರುವ ಪ್ರದೇಶದಿಂದ ಪರಿಶೀಲನೆಗೆ ತಾವು ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಪ್ರಶ್ನೆಯಲ್ಲಿ ಯಾವ ಪ್ರದೇಶವನ್ನು ನಮೂದು ಮಾಡಿದ್ದೀರೋ ಅದೇ ಪ್ರದೇಶದಿಂದ ಪರಿಶೀಲಿಸಿದ್ದಾರೆಂದು ಸರ್ಕಾರಕ್ಕೆ ವರದಿ ಬಂದಿದೆ.

ಶ್ರೀ ಮುದ್ದುರಾಮಯ್ಯ.—ಆ ರೀತಿ ಆಗಿಲ್ಲ ವೆಂಬುದು ನನಗೆ ಗೊತ್ತಿದೆ. ಆದ್ದರಿಂದ ಮತ್ತೊಮ್ಮೆ ಪರಿಶೀಲನೆಗೆ ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ವಿವರಗಳನ್ನು ತಾವು ಪತ್ರ ಬರೆದು ತಿಳಿಸಿದರೆ ಪುನಃ ಪರಿಶೀಲಿಸುತ್ತೇನೆ.

Deputy Trade Agent in London.

Q.—734. Sri M. CHIKKALINGIAH (Malavalli—Scheduled Castes).—

Will the Government be pleased to state.—

(*a*) whether there was a vacancy in the office of the Deputy Trade Agent in London ;

(*b*) if so, whether the same has been filled up and by whom ?

A.—Sri H. SIDDAVEERAPPA (Minister for Home and Industries).—

(*a*) and (*b*) Consequent on the retirement of Sri R. K. Murthy with effect from 31st December 1954, the post of Deputy Trade Agent became vacant. It is not proposed to continue this post. Instead, the post of a Manager for the Trade Agent's Office has been sanctioned on a remuneration of £ 550 per annum for a period of two years and Sri M. Ramachandra Rao, M.A., has been appointed to this newly created post.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡೆಪ್ಯುಟಿ ಟ್ರೇಡ್ ಏಜೆಂಟರು ಹಿಂದೆ ಯಾರಿದ್ದರೋ ಅವರ ನಂಬಳವೇನು ?

ಶ್ರೀ ಎಚ್ ಸಿದ್ಧವೀರಪ್ಪ.—750 ಪೌಂಡುಗಳು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಕಡಮೆ ಮಾಡಿರುವುದರಿಂದ ಆ ಜಾಗಕ್ಕೆ ಹೋಗುವವರಿಗೆ ಸ್ಪೆಷಲ್ ಡಿಸ್‌ಕರೇಜ್‌ಮೆಂಟ್ ಆಗಿ ದಕ್ಷತೆ ಕಡಮೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಡೆಪ್ಯುಟಿ ಟ್ರೇಡ್ ಏಜೆಂಟರಿಗೆ ಬದಲಾಗಿ ಒಬ್ಬ ಮ್ಯಾನೇಜರನ್ನು ನೇಮಿಸಲಾಗಿದೆ. ಹಿಂದೆ ಇದ್ದವರು 20-30 ವರ್ಷ ಆ ಸಂಸ್ಥೆಯಲ್ಲಿ ದುಡಿದಿದ್ದರಿಂದ ಅವರಿಗಾಗಿ ಸ್ಪೆಷಲ್ಲಾಗಿ ಡೆಪ್ಯುಟಿ ಟ್ರೇಡ್ ಏಜೆಂಟರ ಹುದ್ದೆಯನ್ನು ಎರಡು ವರ್ಷಕ್ಕೆ ಮಾತ್ರ ಕ್ರಿಯೇಟ್ ಮಾಡಿದ್ದೆವು.

ಶ್ರೀ ಎಂ. ಚಿಕ್ಕಲಿಂಗಯ್ಯ.—ರಾಮಚಂದ್ರ ರಾಯರು ಇಂಡಸ್ಟ್ರೀಸ್ ಇಲಾಖೆಯಲ್ಲಿದ್ದವರೆ ಅಥವಾ ಹೊರಗಡೆಯಿಂದ ಕರೆಸಲ್ಪಟ್ಟವರೆ ?

ಶ್ರೀ ಎಚ್ ಸಿದ್ಧವೀರಪ್ಪ.—ಇದುವರೆಗೆ ಅವರು ಸರ್ಕಾರದ ಇಲಾಖೆಯಲ್ಲಿರಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರು ಇಂಡಸ್ಟ್ರಿಯಲ್ ಇಲಾಖೆಯಲ್ಲಲ್ಲದಿರುವಾಗ ಈ ಕೆಲಸಕ್ಕೆ ಅವರನ್ನು ಯಾವ ಆಧಾರದ ಮೇಲೆ ನೇಮಿಸಿಕೊಂಡಿರಿ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಕೆಲಸಕ್ಕೆ ಲಾಯಖ್ಖಾಗಿದಾರೆಂದು ತಿಳಿದು ಬಂದುದರಿಂದ ನೇಮಿಸಿದೆವು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರು ಲಾಯಖ್ಖಾಗಿದಾರೆಂದು ಎಲ್ಲಿಂದ ಸರ್ಟಿಫಿಕೇಟ್ ಬಂದಿದೆ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಈಗ ಹೇಳಬೇಕಾದ ವಿವರವಲ್ಲ. ಸರ್ಕಾರಕ್ಕೆ ಅವರು ಈ ಕೆಲಸಕ್ಕೆ ಲಾಯಖ್ಖಾದವರೆಂದು ಮನದಟ್ಟಾದ ಮೇಲೆ ಅವರನ್ನು ತೆಗೆದುಕೊಂಡೆವು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಇಲಾಖೆಯಲ್ಲಿ ದುಡಿದು ಅನುಭವ ಪಡೆದಿರುವವರಿಗೇಕೆ ಈ ಅವಕಾಶ ಕೊಡಬಾರದಾಗಿತ್ತು?

ಶ್ರೀ ಎಚ್. ಸಿದ್ದವೀರಪ್ಪ.—ಇದು ಬಹಳ ಚೆಂಪೊರೆಫೋನ್ಸ್; ಎರಡು ವರ್ಷಕ್ಕೆ ಮಾತ್ರ ನೇಮಕ ಮಾಡಿಕೊಂಡಿದೆ ಎಂಬುದನ್ನು ತಾವು ಅರಿಯಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬೇರೆ ಸರ್ಕಾರದವರು ಈ ರೀತಿ ಲಂಡನ್ನಲ್ಲಿ ಟ್ರೇಡ್ ಕಮಿಷನರನ್ನು ಸಿವಿಲರ್ ಇಂಡಸ್ಟ್ರಿಗಳಿಗೆ ನೇಮಕ ಮಾಡಿರುವರೆ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಮೈಸೂರಿನವರೇ ಇಟ್ಟುಕೊಂಡಿರುವುದು.

Sri A. BHEEMAPPA NAIK.—Sir, what was Sri Ramachandra Rao before he was appointed to this post?

Sri H. SIDDAVEERAPPA.—So far as I know, Sir, he was not in Government service, subject to correction.

Sri A. BHEEMAPPA NAIK.—Is he appointed as probationer or were any applications called for and he was selected from among them?

Sri H. SIDDAVEERAPPA.—I am given to understand that he has varied knowledge of trade and industry on the Continent. He was in London for quite a number of years. I am given to understand that this post was not advertised for the reason that it does not come within the purview of the P.S.C. Rules.

Sri A. BHEEMAPPA NAIK.—What was he doing and what is his experience? Where did he work before? Should we not know these details?

Sri H. SIDDAVEERAPPA.—I am given to understand he was doing some private business for some time in the Continent.

Sri A. BHEEMAPPA NAIK.—Is he a jack of all trades or only one or two trades, Sir? Will you please consider the question of sending some people from our Departments—just as we have done in the case of Vijayaraghava Reddy—so that they may gain experience? Will you please consider the desirability of appointing one of our officers of the Department of Industries so that he may gain some experience there for the benefit of our Department?

Sri H. SIDDAVEERAPPA.—That question will have to be considered after the present period is over. He is appointed only temporarily for a period of two years.

Sri A. BHEEMAPPA NAIK.—On whose advice was he appointed?

Sri H. SIDDAVEERAPPA.—Sir, he applied. The Government was satisfied that he was fit to hold the post. There was no special recommendation from anybody.

Mr. SPEAKER.—The intention is to know whether he was recommended by the Trade Commissioner in London.

Sri H. SIDDAVEERAPPA.—The Trade Commissioner has not recommended.

Sri A. BHEEMAPPA NAIK.—In that case, even when the Hon'ble Minister gives his reply, he does not know where he was working before; how was he satisfied about his capacity?

Sri H. SIDDAVEERAPPA.—From the information made known to Government by the applicant and also from the information gathered from other sources, Government was satisfied that he was fit to hold that post.

Sri A. BHEEMAPPA NAIK.—What were these big and blooming sources that gave you that information?

(*Laughter*)

Sri K. LAKKAPPA.—May I know Sir, whether there is any relationship between the Trade Commissioner's office and the office of the Deputy Trade Agent?

Sri H. SIDDAVEERAPPA.—He works directly under the Trade Agent in a subordinate capacity. As a matter of fact when the office of the Deputy Trade Agent was abolished, the Trade Agent made a recommendation to the Government that it would be impossible for him to carry on the work unless somebody was appointed to that office though not necessarily as a Deputy Trade Agent but as a General Manager. The Government was told that it would be necessary in the interest of Government work that somebody should be appointed. Government considered the

(SRI H. SIDDAVEERAPPA.)

application of Sri Ramachandra Rao and decided to appoint him temporarily.

Sri K. LAKKAPPA.—In view of the volume of the business done there, don't you feel that there is no necessity for such an appointment there ?

Sri H. SIDDAVEERAPPA.—As I have already made it clear, the Trade Agent represented to us several times—as a matter of fact this place was vacant for a good number of months—that it would be impossible to carry on the work without somebody looking after the office, working during his absence since he will have to be touring almost all the time in the Continent. On his recommendation, this appointment was made.

Sri K. LAKKAPPA.—May I know the total volume of business done ?

Mr. SPEAKER.—It is given here.

Sri K. LAKKAPPA.—What are all the commodities for which they have secured orders ?

Sri H. SIDDAVEERAPPA.—That is also given. Besides these, he looks after our interests in the matter of huge purchases through the Stores Purchase Committee. Sometimes we have to make purchases to the tune of Rs. 10 lakhs, Rs. 20 lakhs, Rs. 30 lakhs, like that, for all our various departments. The Stores Purchase Committee entrusts him with the work of contacting various firms there and trying to find out which are the good firms. He acts as a liaison officer between the Stores Purchase Committee and the seller for placing huge orders. Further, we have our own sandalwood oil factory in America. He manages that work. He sends sandalwood from here and oil is extracted in America. If we had entrusted this work to any private agent, we would have spent more than what we are actually spending on the office of the Trade Agent. Actually, this comes to less than 2½ per cent on the total turnover of the work done by our Trade Agent.

ಶ್ರೀ ವಿ. ಆರ್. ನಾಯ್ಡು.—ಈ ಟ್ರೇಡ್ ಅಫೀಸಿನಲ್ಲಿ ನಮ್ಮ ನೌಕರರ ಒಟ್ಟು ಎಷ್ಟು ಜನ ಇದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಹೊಸದಾಗಿ ನೇಮಕವಾಗಿರುವ ಮ್ಯಾನೇಜರು ಒಬ್ಬರು ಇದ್ದಾರೆ, ಮತ್ತು 4 ಜನ ಸ್ಟೆನೋಗ್ರಾಫರ ಗಳು ಇದ್ದಾರೆ. ಅಲ್ಲೆಲ್ಲಾ ನಮ್ಮ servants ಇರುವುದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಆ ಆಫೀಸು ಸಮರ್ಪಕವಾಗಿ ನಡೆಯುತ್ತ ಇದೆ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಮರ್ಪಕವಾಗಿದೆ.

ಶ್ರೀ ವಿ. ಆರ್. ನಾಯ್ಡು.—ತಾವು ಏನಾದರೂ ಅಲ್ಲಿ spot inspection ಮಾಡುವ ಸಂಭವ ಇದೆಯೆ ! (ಸಭೆಯಲ್ಲಿ ನಗು)

(No answer)

Sri A. V. NARASIMHA REDDY.—Is the newly appointed Manager a Mysorean by birth ?

Sri H. SIDDAVEERAPPA.—He is an Indian.

Sri A. V. NARASIMHA REDDY.—Will I be correct to say that he hails from Bihar ?

Sri H. SIDDAVEERAPPA.—From Orissa.

Sri Kadidal MANJAPPA (Minister for Revenue and Public Works).—I am told that he is related to Sri Rangantha Rao Saheb, ex-Trade Commissioner.

Sri A. V. NARASIMHA REDDY.—In connection with a previous interpellation in this Assembly, has not the Government assured that they would consider the abolition of this Trade Agency of Mysore as such and that the business of Mysore that is to be done in England would be entrusted to the Trade Agent of India Office ?

Sri H. SIDDAVEERAPPA.—That is exactly what the Government of India also wants. If that is the view of this House, this Government feel that if that office is abolished, our industry, specially the Sandalwood Oil industry is bound to suffer. If you pay to the private agents at least the minimum commission of 2½ per cent, you will be spending as much as you are spending on our office there and it is a matter of concession shown to us by the Central Government in having allowed us to have our own Trade Agent. They will be too happy if you abolish it.

Sri A. V. NARASIMHA REDDY.—In case the Government intends to continue that office, would it not be possible to add some more items of products produced in the State to be sold through this office ?

Sri H. SIDDAVEERAPPA.—That is under the consideration of the Government.

Sri M. VENKATESH.—Are the Government of opinion that if they had advertised the post in the Papers, they could have got a better person than this man, Sri Ramachandra Rao ?

Sri H. SIDDAVEERAPPA.—It is a matter of opinion.

Sri M. VENKATESH.—Is there any consideration other than the efficiency of this man for this appointment ?

Sri H. SIDDAVEERAPPA.—So far as the Government are concerned, we have no other consideration.

Cement Factory at Hosadurga.

Q.—769. Sri G. BASAPPA (Hosadurga).—

Will the Government be pleased to state :—

(*a*) whether any survey was conducted for starting a cement factory in Hosadurga Taluk ;

(*b*) the result of the survey ;

(*c*) whether it will be included in the Second Five-Year Plan ?

A.—Sri H. SIDDAVEERAPPA (Minister for Home and Industries).—

(*a*) A preliminary survey was conducted by the Deparatment of Geology during the period 1949-50.

(*b*) The above exploration survey has revealed that about 10-15 million tons of limestone could be had in the area comprising of Kanchipura including Kellodu Village, Madakere and Marikanave.

(*c*) Not practicable.

ಶ್ರೀ ಜಿ. ಬಸಪ್ಪ.—ಈಗ ನಮ್ಮ ಮೈಸೂರು ಸಂಸ್ಥಾನದಲ್ಲಿ ಎಷ್ಟು ಸಿಮೆಂಟ್ ಉತ್ಪನ್ನವಾಗುತ್ತಾ ಇದೆ ?

ಶ್ರೀ ಎಚ್. ಸಿದ್ದವೀರಪ್ಪ.—ಭದ್ರಾವತಿಯಲ್ಲಿ ಅದರ capacity ಇರುವುದು 80 ಸಾವಿರ ಟನ್. Actual ಆಗಿ manufacture ಆಗುತ್ತಾ ಇರುವುದು 72-75 ಸಾವಿರ ಟನ್‌ಗಳು.

ಶ್ರೀ ಜಿ. ಬಸಪ್ಪ.—ಮೈಸೂರು ಸಂಸ್ಥಾನಕ್ಕೆ ಹೊರಗಡೆಯಿಂದ ಎಷ್ಟು ಬರುತ್ತಾ ಇದೆ, ಇಲ್ಲಿನ requirements ಎಷ್ಟು ?

Sri H. SIDDAVEERAPPA.—It is estimated that we require one lakh tons. Of course, sometimes due to various developmental works we have taken, we may require something more, but our normal requirements are to the tune of one lakh tons.

ಶ್ರೀ ಜಿ. ಬಸಪ್ಪ.—ಹೊರಗಡೆಯಿಂದ ತರಿಸಿ ಕೊಳ್ಳುತ್ತಾ ಇದ್ದೀವೆ ಎಂದು ಒಪ್ಪಿಕೊಂಡ ಹಾಗೆ ತಾನೆ ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ? 20 ಸಾವಿರ ಟನ್ ಮಾತ್ರ ತರಿಸುತ್ತಾ ಇದ್ದಾರೆ.

ಶ್ರೀ ಜಿ. ಬಸಪ್ಪ.—ಆದ್ದರಿಂದ ಇದನ್ನು expand ಮಾಡತಕ್ಕ ಅವಶ್ಯಕತೆ ಇದೆ ಎಂದು ಒಪ್ಪಿಕೊಳ್ಳುತ್ತೀರಾ ?

Sri H. SIDDAVEERAPPA.—We will anyhow consider this question during our Second Five-Year Plan and even if we consider, I doubt very much whether Kellodu will have the factory.

ಶ್ರೀ ಜಿ. ಬಸಪ್ಪ.—ಕೋ-ಆಪರೇಟೀವ್ ಬೇಸಿಸ್ ಮೇಲೆ ಅಥವಾ ಜಾಯಿಂಟ್ ಸ್ಟಾಕ್ ಕಂಪೆನಿ ಬೇಸಿಸ್ ಮೇಲೆ ಇದನ್ನು ಮಾಡುತ್ತೇವೆ ಎಂದು ಯಾರಾದರೂ ಬಂದರೆ ಅವರಿಗೆ ನೆರವನ್ನು ಕೊಡುತ್ತೀರಾ ?

Sri H. SIDDAVEERAPPA.—I have no objection. If anybody comes forward, short of asking finances, I am prepared to give all help.

Sri A. BHEEMAPPA NAIK.—Was it not considered desirable to have a branch there so that clinker manufacture might be done at Kellodu and later on carried away to Bhadravati for grinding purposes ?

Sri H. SIDDAVEERAPPA.—As the Hon'ble Member is perhaps aware, this question has been examined a number of times. As a matter of fact, it is pending consideration from 1947. A Special Committee was appointed in 1948. I have the reports from important experts both from the Director of Geology and the Director of Industries and Commerce in Bhadravathi. On technical grounds they say that although raw materials are available, there are various other handicaps there : One is, coal is not available at fairly reasonable price. (2) A fairly large foundry and a well-equipped machine shop for attending to the maintenance and repair jobs and also manufacture of simple essential spare parts. (3) A well laid down meter guage track system connected with the railway system for unloading of raw materials, handling of rubbish, etc., and disposal of finished products. The most important point for consideration is, the railway line is about 30 miles away from the place where this factory is proposed to be located.